ವಿಜಯವಾಣಿ ನಂ.1

'ಸ್ಟಾರ್ಟ್‌ಅಪ್ ಯಾತ್ರಾ' ಕಾರ್ಯಾಗಾರ | ಅಮಿತ್ ಶರ್ಮಾ ಸಲಹೆ

# ನವೋದ್ಯಮಿಗಳ ಉತ್ತೇಜನಕ್ಕೆ ಭರಪೂರ ಕೊಡುಗೆ

■ ವಿಜಯವಾಣಿ ಸುದ್ದಿಜಾಲ ಹುಬ್ಬಳ್ಳಿ

ನವೋದ್ಯಮಿಗಳ ಉತ್ತೇಜನಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಭರಪೂರ ಕೊಡುಗೆ ನೀಡುತ್ತಿವೆ ಎಂದು 'ಸ್ಟಾರ್ಟ್ ಅಪ್ ಇಂಡಿಯಾ' ತಂಡದ ಅಮಿತ್ ಶರ್ಮಾ ಹೇಳಿದರು.

ಕೇಂದ್ರ ಸರ್ಕಾರದ ಸ್ಟಾರ್ಟ್‌ಅಪ್ ಇಂಡಿಯಾ ಹಾಗೂ ಸ್ಟಾರ್ಟ್‌ಅಪ್ ಕರ್ನಾಟಕ ಸಹಭಾಗಿತ್ವದಲ್ಲಿ ಗೋಕುಲ ರಸ್ತೆಯ ದೇಶಪಾಂಡೆ ಫೌಂಡೇಷನ್ ಸ್ಯಾಂಡ್‌ಬಾಕ್ಸ್ ಸ್ಟಾರ್ಟ್‌ಅಪ್ಸ್ ಕ್ಯಾಂಪಸ್‌ನಲ್ಲಿ ಸೋಮವಾರ ಆಯೋಜಿಸಿದ್ದ 'ಸ್ಟಾರ್ಟ್‌ಅಪ್ ಯಾತ್ರಾ' ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ನವೋದ್ಯಮಿಗಳ ಉತ್ತೇಜನಕ್ಕೆ 10 ಲಕ್ಷ ರೂ. ಸಾಲ ನೀಡಲಾಗುತ್ತಿದೆ. ಮಹಿಳಾ ನವೋದ್ಯಮಿಗಳ ಉತ್ತೇಜನಕ್ಕೆ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ. ತೆರಿಗೆ ವಿನಾಯಿತಿಯನ್ನೂ ಕೊಡಲಾಗುತ್ತಿದೆ. ಇಂಥ ಸೌಲಭ್ಯಗಳನ್ನು ಪಡೆಯಲು ಡಿಐಪಿಪಿಯಲ್ಲಿ ತಾವು ಆರಂಭಿಸಿದ ಉದ್ಯಮದ ಹೆಸರು ನೋಂದಾಯಿಸಿರಬೇಕು ಎಂದರು.

ದೇಶಾದ್ಯಂತ ಕಾರ್ಯಾಗಾರ ನಡೆಸಲಾಗುತ್ತಿದೆ. 20ನೇ ರಾಜ್ಯ ಕರ್ನಾಟಕ. ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಸ್ಟಾರ್ಟ್ ಅಪ್ ಪಿಚ್ಚಿಂಗ್ ಆಯೋಜಿಸಲಾಗುತ್ತಿದೆ. ಇದರಲ್ಲಿ ಆಯ್ಕೆಯಾದ ನವೋದ್ಯಮಿಗಳಿಗೆ ಬಹುಮಾನ ವಿತರಿಸಲು ನಿರ್ಧರಿಸಲಾಗಿದೆ ಎಂದರು. ಸ್ಯಾಂಡ್‌ಬಾಕ್ಸ್ ಸ್ಟಾರ್ಟ್‌ಅಪ್ಸ್ ಸಿಇಒ ಸಿ.ಎಂ. ಪಾಟೀಲ ಮಾತನಾಡಿ, ದೇಶಪಾಂಡೆ ಫೌಂಡೇಷನ್ ಹಲವರು ಉದ್ಯಮಿಗಳಿಗೆ ಮಾರ್ಗದರ್ಶನ ನೀಡುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಕಾರ ಸಿಗುತ್ತಿದೆ. ದೊಡ್ಡ ಕಂಪನಿಗಳು ಬರೀ ಮೆಟ್ರೋ ಸಿಟಿಗಳಲ್ಲಿ ಇರುವುದಕ್ಕಿಂತ ನಾನ್‌ಮೆಟ್ರೋ ಸಿಟಿಗಳತ್ತ ಧಾವಿಸಬೇಕಿದೆ. ಇದಕ್ಕೆ ಪೂರಕವಾದ ವಾತಾವರಣವನ್ನೂ ನಿರ್ಮಿಸಲಾಗುವುದು ಎಂದು ಹೇಳಿದರು.



ಹುಬ್ಬಳ್ಳಿ ಗೋಕುಲ ರಸ್ತೆಯ ದೇಶಪಾಂಡೆ ಫೌಂಡೇಷನ್‌ನ ಸ್ಯಾಂಡ್‌ಬಾಕ್ಸ್ ಸ್ಟಾರ್ಟ್ ಅಪ್ಸ್ ಕ್ಯಾಂಪಸ್‌ನಲ್ಲಿ ಆಯೋಜಿಸಿದ್ದ 'ಸ್ಟಾರ್ಟ್‌ಅಪ್ ಯಾತ್ರಾ' ಕಾರ್ಯಾಗಾರದಲ್ಲಿ 'ಸ್ಟಾರ್ಟ್‌ಅಪ್ ಇಂಡಿಯಾ' ತಂಡದ ಅಮಿತ್ ಶರ್ಮಾ ಮಾತನಾಡಿದರು.

### ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆ

**ಸ್ಟಾರ್ಟ್‌ಅಪ್ ಯಾತ್ರಾದಲ್ಲಿ ಭಾಗವಹಿಸಿದ್ದ 70 ನವೋದ್ಯಮಿಗಳು ತಮ್ಮ ಐಡಿಯಾಗಳನ್ನು ಪ್ರಸ್ತುತ ಪಡಿಸಿದರು. ಇದರಲ್ಲಿ 15 ಜನರು ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದು, ದೇಶಪಾಂಡೆ ಫೌಂಡೇಷನ್‌ಗೆ ಸೇರಿದ 14 ನವೋದ್ಯಮಿಗಳಿದ್ದು, ಒಬ್ಬರು ಬೆಳಗಾವಿಯವರಾಗಿದ್ದಾರೆ. ಅಂತಿಮ ಸ್ಪರ್ಧೆ ಬೆಂಗಳೂರಿನಲ್ಲಿ ನಡೆಯಲಿದೆ.**